


### ಸಿನಿಮಾದವರು ಕಲಿಯಲಿ

ಡಿ.20ರ ಮುಖಪುಟ ಲೇಖನ '2012 ವರ್ಷದ ಸಿನಿಮಾ'ದಲ್ಲಿ ಬಿ.ಎಂ.ಹನೀಫ್‌ರ 'ಅದೇ ರಾಗ, ಅದೇ ಹಾಡು!' ಸಿನಿಮಾ ನಿರ್ಮಿಸುವವರಿಗೆ ದಿಕ್ಸೂಚಿಯಂತಹ ಸಲಹೆ ಒಳಗೊಂಡಿದ್ದರೆ, ರಘುನಾಥ ಚ.ಹ.ಅವರ 'ದ್ವಾದಶ ಫಲ' ವಿಮರ್ಶಾತ್ಮಕ ಬರವಣಿಗೆಯಾಗಿದೆ.

–ನೆ.ಲ.ರಾಂ, ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು/ ಸು.ವಿಜಯಲಕ್ಷ್ಮಿ, ಶಿವಮೊಗ್ಗ

### ಮನಗೆದ್ದ ಭಾಗೀರತಿ, ರಾಯಣ್ಣ

ಐತಿಹಾಸಿಕ ಪೌರಾಣಿಕ ಚಿತ್ರಗಳ ಕಾಲ ಮುಗಿಯೇತೇನೋ ಅನ್ನುವಾಗ ಜಾನಪದದ ಕಥೆ 'ಭಾಗೀರತಿ', ಐತಿಹಾಸಿಕ 'ಸಂಗೊಳ್ಳಿ ರಾಯಣ್ಣ' ಜನಮನ ಸೂರೆಗೊಂಡದ್ದು ಸುಳ್ಳಲ್ಲ. ಭಾಗೀರತಿ ಎಲ್ಲ ಕಡೆ ನೋಡಲು ಸಿಗುತ್ತಿಲ್ಲ, ಆದರೆ ರಾಯಣ್ಣ ಈಗಲೂ ಎಲ್ಲಾ ಕಡೆ ನೋಡಲು ಲಭ್ಯ.

–ಕೊಹಿಮ, ಬಸರಕೋಡು/ ಎಚ್.ಎಂ.ಕಾಳಮ್ಮ, ಹಗರಿ ಬೊಮ್ಮನಹಳ್ಳಿ

### ನೋಡಿಸಿಕೊಳ್ಳದ ಸಿನಿಮಾ

ಈಗ ಬಿಡುಗಡೆ ಆಗುತ್ತಿರುವ ಯಾವುದೇ ಸಿನಿಮಾ ಒಂದು ವಾರವೂ ಓಡುತ್ತಿಲ್ಲ! ಅವುಗಳ ಹಾಡು ಮರುದಿನವೇ ನೆನಪಿರುವುದಿಲ್ಲ. ಹಿಂದೆ ತೆರೆಕಾಣುತ್ತಿದ್ದ ಎಲ್ಲ ಸಿನಿಮಾಗಳು ನೋಡುವ ಹಾಗಿರುತ್ತಿದ್ದವು. ಇಂದು ಎಲ್ಲೋ ಒಂದಕ್ಕೆ ಮಾತ್ರ ಅಂತಹ ಯೋಗ್ಯತೆ.

–ಎಚ್.ಆರ್.ದೇಸಾಯಿ, ರಾಯಚೂರು/ ಬಿ.ಎಸ್.ರಮೇಶ್, ಬೆಂಗಳೂರು

### ಸುಳ್ಳಿಗೆ ಸಾವಿಲ್ಲ!

ಸುಳ್ಳಿನ ಬಗೆಗೆ ಶಿಕಾಕು ಅವರ ವಿಚಾರ ಲಹರಿ ಎಂದೆಂದಿಗೂ ಪ್ರಸ್ತುತ. ಸುಳ್ಳಿಗೆ ಸಾವೇ ಇಲ್ಲ ಎನ್ನುವುದು ಮಾತ್ರ ಸತ್ಯವೇ ಅಲ್ಲವೇ?

–ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ

### ಸೊಗಸಾದ ಚಿತ್ರ ಲೇಖನ

'ತಿಮಿಂಗಿಲ ದರ್ಶನ' ಬೃಂದಾ ಎನ್.ರಾವ್ ಚಿತ್ರಲೇಖನ ಸೊಗಸಾಗಿ ಮೂಡಿಬಂದಿದೆ.

–ಎಸ್.ನಿತ್ಯ, ಮೂಡಬಿದಿರೆ/ ಓಂ. ಚನ್ನೇಶ್, ಅರಬಿಳಚಿ

### ಮಹಿಳಾ ಪಕ್ಷಪಾತಿ ರಾಮ್!

ಡಿ.13ರ 'ಸುಧಾ' ಸಂಚಿಕೆಯ 'ನೀವು ಕೇಳಿದಿರಿ?'ಯಲ್ಲಿ ರಾಮ್ ಅವರು, 'ಗಂಡ ಹೆಂಡತಿ ಮೇಲೆ ಮಾಡುವುದು ಕ್ರೌರ್ಯ, ಹೆಂಡತಿ ಗಂಡನ ಮೇಲೆ ದೌರ್ಜನ್ಯ ನಡೆಸಿದರೆ ಅದು ಆ ಜನ್ಮಸಿದ್ಧ ಹಕ್ಕು' ಎಂದು ನೀಡಿರುವ ಉತ್ತರ ಹೆಣ್ಣಿನ ದಬ್ಬಾಳಿಕೆಗೆ ಖಂಡನೆಯೋ ಅಥವಾ ಪ್ರೇರಣೆಯೋ ತಿಳಿಯುತ್ತಿಲ್ಲ. ರಾಮ್‌ರ ಬಹುತೇಕ ಉತ್ತರಗಳು ಮಹಿಳಾ ಪಕ್ಷಪಾತಿ ಆಗಿರುವುದರಿಂದ ಈ ಜಿಜ್ಞಾಸೆ ನನ್ನಲ್ಲಿ ಮೂಡಿದೆ.

–ಪಿ.ಎಂ.ಸುರೇಶ್, ತುಮಕೂರು

### ನೂರ್ಕಾಲ ಬಾಳಲಿ

ವಂಡರ್ ಪುಟ (ಡಿ.13) ದಲ್ಲಿ ಪಂಜಾಬ್ ಮೂಲದ ಕರಮ್ ಹಾಗೂ ಕತಾರಿ ಜೋಡಿ 87 ವರ್ಷಗಳ ವೈವಾಹಿಕ ಜೀವನ ನಡೆಸಿ ಆ ಮೂಲಕ ಅವರು ವಿಶ್ವದ ಅತಿ ಹೆಚ್ಚು ಕಾಲ ವೈವಾಹಿಕ ಜೀವನ ನಡೆಸಿದ ಖ್ಯಾತಿಗೆ ಪಾತ್ರರಾದದ್ದು ಓದಿ ಸಂತಸವಾಯಿತು. ಅವರು ಇನ್ನೂ ನೂರ್ಕಾಲ ಬಾಳಲಿ.

–ಮಹೇಶ ಈರಣ್ಣ, ಲಿಂಗಸೂಗೂರು

### 'ಗಿರಿಜಾ ಕಲ್ಯಾಣ' ಓದಲು ಸ್ಫೂರ್ತಿ

ಬಹಳ ದಿನಗಳಿಂದ ಇಂತಹ ಪೌರಾಣಿಕ ಧಾರಾವಾಹಿ ಓದಿರಲಿಲ್ಲ. ಹಾಗಾಗಿ ಜಿ.ಕೃಷ್ಣಪ್ಪನವರು ಸರಳಗನ್ನಡದಲ್ಲಿ ಕಟ್ಟಿಕೊಟ್ಟಿರುವ ಮಹಾಕವಿ ಹರಿಹರನ 'ಗಿರಿಜಾ ಕಲ್ಯಾಣ' ಓದಲು ಸ್ಫೂರ್ತಿ ಉಂಟಾಗುತ್ತಿದೆ. ಮುಂದಿನ ವಾರಗಳಲ್ಲಿ ಏನಿರಬಹುದು ಎಂಬ ಕುತೂಹಲ ಸೃಷ್ಟಿಸಿದೆ.

ಬಿ.ಎಸ್.ಮುಳ್ಳೂರ, ಹಲಗತ್ತಿ

### ಬೇಂದ್ರೆ, ಕೃಷ್ಣಪ್ಪರ ಆಕರ್ಷಣೆ

ಜಿ.ಕೃಷ್ಣಪ್ಪನವರು ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಆಗುಂಬೆ, ಮಗರವಳ್ಳಿ, ಕೋಣಂದೂರುಗಳಲ್ಲಿ ಕವಿ ಬೇಂದ್ರೆಯವರ ಕುರಿತು ಕಾರ್ಯಕ್ರಮ ನಡೆಸಿ ನಮಗೆ ಆಪ್ತರಾಗಿದ್ದಾರೆ. ನಮ್ಮ ಕೃಷ್ಣಪ್ಪನವರ ಹೆಸರು ನೋಡಿದ ಕೂಡಲೇ 'ಗಿರಿಜಾ ಕಲ್ಯಾಣ'ವನ್ನು ಓದಲು ಮನಸ್ಸು ಬಂತು.

ಎಸ್.ಕುಮಾರಸ್ವಾಮಿ, ಮೇಗರವಳ್ಳಿ

### ಅರವಿಂದರ 'ಸಾವಿತ್ರಿ'ಯ ಹಾಗೆ

'ಗಿರಿಜಾ ಕಲ್ಯಾಣ' ಪೌರಾಣಿಕ ಧಾರಾವಾಹಿಯನ್ನು ಪ್ರಕಟಿಸುವ ಮೂಲಕ 'ಸುಧಾ' ಓದುಗರ ಹೃದಯಕ್ಕೆ 'ಸುಧೆ' ಎರೆಯುತ್ತಿದೆ. ಮಹರ್ಷಿ ಅರವಿಂದರ 'ಸಾವಿತ್ರಿ' ಮಹಾಕಾವ್ಯದಂತೆ, ಹರಿಹರನ ಕಾವ್ಯದ



ಕಥೆ ತೆಳುವಾದರೂ, ಪ್ರಕೃತಿ ವರ್ಣನೆಯ ವೈವಿಧ್ಯ ವಿಸ್ಮಯವಾದುದು.

ಜ.ಹೊ.ನಾರಾಯಣಸ್ವಾಮಿ, ಹಾಸನ

### ಅಬ್ಬಬ್ಬಾ! ಏನು ವರ್ಣನೆ!

ಏನದು ಜಲಕ್ರೀಡೆಯ ವರ್ಣನೆ! ಏನದು ಶರ್ವಾಣಿಯ ವರ್ಣನೆ! ಏನದು ಬೆಳದಿಂಗಳ ವರ್ಣನೆ! ಹರಿಹರನ 'ಗಿರಿಜಾ ಕಲ್ಯಾಣ' ಅಬ್ಬಬ್ಬಾ!

ವಿಶ್ವನಾಥ ಕಂಬಾಗಿ, ಸೋಮಜಾಳ




ಈ ದಿನದ ಊಟದ ಸರದಿ ಅಪ್ಪನದು




ಚುನಾವಣೆ ಮುಗಿದ ಮೇಲೆ ಮಾತೋಣ..